ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಅರಸೀಕೆರೆ.

ಸಿ.ಸಿ. 216/2020

ಫಿರ್ಯಾದುದಾರರು ಃಅರಸೀಕೆರೆ ನಗರ ಪೋಲೀಸ್ ಠಾಣೆ,

ಃಃ ವಿರುದ್ಧ ಃಃ

ಆರೋಪಿತರು ಃ
1. ಕಿರಣ ಬಿನ್ ಮಣಿ, 23 ವರ್ಷ,
ಬೈಲಾಹಳ್ಳಿ ಕಂದ್ಲಿ ಹೋಬಳಿ, ಅರಸೀಕೆರೆ ತಾಲ್ಲೂಕು.
2. ಸಂತೋಷ ಬಿನ್ ನಾಗರಾಜ, 20 ವರ್ಷ,
ಶನಿಮಹಾತ್ಮ ದೇವಸ್ಥಾನದ ಹತ್ತಿರ, ಜೈಲ್ ಹತ್ತಿರ,
ಶ್ರೀನಗರ, ಹಾಸನ.

ಃಃ ದೋಷಾರೋಪಣೆ ಃಃ

ನಿರ್ಮಲ ಕೆ . ಬಿ.ಎ. ಎಂ.ಎಲ್. ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಸೀಕೆರೆ ಆದ ನಾನು, ನಿಮ್ಮ ಮೇಲೆ ದೋಷಾರೋಪಣೆ ಮಾಡುವುದೇನೆಂದರೆಃ

ದಿಃ30-12-2019 ರಂದು ಸಂಜೆ 5-30 ಗಂಟೆ ಸಮಯದಲ್ಲಿ ಅರಸೀಕೆರೆಯ ಹಾಸನ ರಸ್ತೆಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಹತ್ತಿರ ಸಾಕ್ಷಿ-1 ಹಾಗೂ 2 ರವರು ಹಗಲು ಗಸ್ತು ಕರ್ತವ್ಯದಲ್ಲಿದ್ದಾಗ ಆರೋಪಿತರಾದ ನೀವುಗಳು ಸಾಕ್ಷಿ-7 ರವರಖಾಲಿ ನಿವೇಶನದಲ್ಲಿದ್ದ ಶ್ರೀಗಂಧದ ಮರಗಳನ್ನು ಮಚ್ಚು, ಗರಗರಸದ ತುಂಡು, ಕಬ್ಬಿಣದ ಚೂಪಾದ ರಾಡಿನಿಂದ ಬೇರು ಸಮೇತ ಕಡಿದು ಸಣ್ಣ ಸಣ್ಣ ತುಂಡುಗಳು ಹಾಗೂ ಚಕ್ಕೆಗಳಾಗಿ ಮರಡಿಕೊಂಡು, ಬಿಳಿಯ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಕೊಂಡು ಕೆಎ-54-ಹೆಚ್-5360 ಡಿಸ್ಕವರಿ ಬೈಕ್ ನಲ್ಲಿ ಇಟ್ಟುಕೊಂಡು ಮಾರಾಟ ಮಾಡಲು ತೆಗೆದುಕೊಂಡು ಹೋಗಿರುತ್ತೀರಿ. ಈ ಮೂಲಕ ಕಲಂ 379 ಭಾ. ದಂ. ಸಂ. ಅನ್ವಯ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವುಗಳು ಸಾಕ್ಷಿ-7 ರವರ ಖಾಲಿ ನಿವೇಶನದಲ್ಲಿದ್ದ ಶ್ರೀಗಂಧದ ಮರಗಳನ್ನು ಮಚ್ಚು, ಗರಗರಸದ ತುಂಡು, ಕಬ್ಬಿಣದ ಚೂಪಾದ ರಾಡಿನಿಂದ ಬೇರು ಸಮೇತ ಕಡಿದು ಸಣ್ಣ ಸಣ್ಣ ತುಂಡುಗಳು ಹಾಗೂ ಚಕ್ಕೆಗಳಾಗಿ ಮರಡಿಕೊಂಡು, ಬಿಳಿಯ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿಕೊಂಡು ಕೆಎ-54-ಹೆಚ್-5360 ಡಿಸ್ಕವರಿ ಬೈಕ್ ನಲ್ಲಿ ಇಟ್ಟುಕೊಂಡು ಮಾರಾಟ ಮಾಡಲು ತೆಗೆದುಕೊಂಡು ಹೋಗಿರುತ್ತೀರಿ. ಈ ಮೂಲಕ ಕಲಂ ಸಹ ಕಲಂ 86, 87 ಕೆ.ಎಫ್. ಆಕ್ಟ್ ಅನ್ವಯ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುತ್ತೀರಿ.

( ಮೇಲಿನ ಆಪಾದನೆಯನ್ನು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ಅವರು ಅರ್ಥೈಸಿಕೊಂಡು ನೀಡಿದ ಉತ್ತರವನ್ನು ಸರಿಯಾಗಿ ನನ್ನ ಸ್ವ ಹಸ್ತದಿಂದ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ)

( ನಿರ್ಮಲ ಕೆ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಅರಸೀಕೆರೆ.